ರಿಸರ್ವೇಷನ್ ಎರಡೂ ಕೊಟ್ಟಿದ್ದೇವೆ. ಇದೂ ಕೂಡ ಅವರೇ ಮಾಡಿದ್ದು ಎಂದು ಕ್ರೆಡಿಟ್ ತೆಗೆದುಕೊಳ್ಳುವುದಿದ್ದರೆ, ಅದು ಅವರಿಗೆ ಬಿಟ್ಟಿದ್ದುದು. They have continued it. That credit they should get it. ನಾನು ಮೈನಾರಿಟೀಸ್ ಶೇಕಡ 6 ಮೀಸಲಾತಿ ಮಾಡಿದಾಗ ಶೇಕಡ 12 ರಷ್ಟು ಮೀಸಲಾತಿ ಮಾಡಬೇಕಾಗಿತ್ತು. ಬಹಳ ತಪ್ಪಾಯಿತು, ದ್ರೋಹ ಆಯಿತು ಎಂದು ಹೇಳಿದ್ದರು. ಈಗ ಶೇಕಡ 6ರ ಮೀಸಲಾತಿಯಿಂದ ಶೇಕಡ 4ಕ್ಕೆ ಇಳಿಸಿದ್ದೀರಿ. ಶೇಕಡ 4 ರಿಂದ ಶೇಕಡ 6ರಷ್ಟನ್ನಾದರೂ ಮಾಡಬೇಕಾಗಿತ್ತಲ್ಲಾ! ಶೇಕಡ 12ರಷ್ಟು ಮೀಸಲಾತಿಯನ್ನು ನೀವು ಅವರಿಗೆ ಮಾಡಿ ನ್ಯಾಯ ಕೊಡಬೇಕಾಗಿತ್ತು. ಈ ನ್ಯಾಯ, ದ್ರೋಹ ಈ ಶಬ್ದ ಭಂಡಾರ ಅಧಿಕಾರಕ್ಕೆ ಬಂದ ಕೂಡಲೇ ನೀವು ತೆಗೆದು ಬಿಟ್ಟಿರಿ. ನ್ಯಾಯ ಅನ್ಯಾಯದ ವ್ಯಾಖ್ಯಾನ ನಿಮ್ಮ ಶಬ್ದ ಭಂಡಾರದಿಂದಲೇ ಹೊರಟು ಹೋಯಿತು.

ಶ್ರೀ ಜೆ.ಹೆಚ್. ಪಟೇಲ್ : ಕಾನಸೆಪ್ಟ್ ಆಫ್ ರಿಸರ್ವೇಷನ್ನನ್ನೇ ಬೇರೆ. ಮೀಸಲಾತಿಯನ್ನು ಶೇಕಡವಾರು ಏರಿಸಿಕೊಂಡು ಹೋಗಬೇಕೆಂದಲ್ಲ. ಕೆಲವು ಕಾಲದ ನಂತರ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನಿಂದ ಬಿಟ್ಟು ಬೇರೆಯವರಿಗೆ ಹೆಚ್ಚು ಬೆನಿಫಿಟ್ ಆಗುವ ಹಾಗೆ ನೋಡಿಕೊಳ್ಳುತ್ತಾ ಹೋಗಬೇಕು ಎಂದು. ಅದು ಬಿಟ್ಟು ನಾವು ಪರ್ಸೆಂಟೇಜ್ ಜಾಸ್ತಿ ಮಾಡಿಕೊಂಡು ಹೋದರೆ, how logical it is? please tell me.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪರ್ಸೆಂಟೇಜ್ 50 ಕ್ಕಿಂತ ಮೇಲೆ ಬರಬೇಕೇ ಬೇಡವೇ ಎಂಬ ವಾದವಿವಾದ ಈಗಲೂ ಇದೆ.

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಮೊಯಿಲಿಯವರೆ, ಒಂದು ನಿಮಿಷ. I welcome the Hon'able speaker of Arunachal Pradesh who is witnessing the proceedings of this House from the Speaker's Gallery.

(ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)

ಶ್ರೀ ಎಂ. ವೀರಪ್ಪಮೊಯಿಲಿ : ನಾನು ಹೇಳುವುದು ಇಷ್ಟೆ. ಶೇಕಡ 12ರಷ್ಟು ಮಾಡಿದರೆ ದ್ರೋಹ ಆಗುತ್ತದೆ ಎಂದು ನಿಮ್ಮ ಪಕ್ಷದ ಈಗಿನ ಅಧ್ಯಕ್ಷರು ಆಗ ಹೇಳಿದ್ದರು. ಈಗ ಶೇಕಡ 4ರಷ್ಟು ಮೀಸಲಾತಿ ಇದೆ. ಅದಕ್ಕೆ ಈಗ ನೀವು ನ್ಯಾಯ ಮಾಡಿ ಎಂದು ನಾನು ಹೇಳುತ್ತೇನೆ. ಹೆಚ್ಚು ಮಾಡತಕ್ಕಂಥದ್ದು, ಕಡಿಮೆ ಮಾಡತಕ್ಕಂಥದ್ದು ಎಂಬ ಮಾದ ಇನ್ನೂ ಇದೆ. ನಾನು ಇವತ್ತೂ ಹೇಳುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಶೇಕಡ 68ಕ್ಕಿಂತ ಹೆಚ್ಚು ಬ್ಯಾಕವರ್ಡ ಕ್ಲಾಸ್‌ಗಳ This 50% is not an adequate provision for the backward classes. I hold that veiw today, whatever view you may hold. ಆದ್ದರಿಂದ ಇವತ್ತು ಅದನ್ನು ಮಾಡಲಿಕ್ಕೂ ಕೂಡ ಈವನ್ ಸುಪ್ರೀಂ ಕೋರ್ಟ್ ವಿಸಿಷನನಲ್ಲೂ ಕೂಡ ಎಲ್ಲಿ ಇದು ಅಡಿಕ್ಟೆಸಿ